ಗೆ,

ಮಾನ್ಯ ಶ್ರೀ ಸುದಾಕರ್ ಎಸ್ ಶೆಟ್ಟಿಯವರು,
ರಾಜ್ಯ ಉಪಾಧ್ಯಕ್ಷರು, ಜನತಾದಳ (ಎಸ್)
ಕರ್ನಾಟಕ.

ಇಂದಾ,

ಅದ್ಯಕ್ಷರು ಮತ್ತು ಸದಸ್ಯರು,
ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪುನರ್ ವಸತಿ ಹೋರಾಟ ಸಮಿತಿ
ಶೃಂಗೇರಿ, ಶೃಂಗೇರಿ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆ – 577139

**ವಿಷಯ: ಕುದುರೇಮುಖ ರಾಷ್ಟ್ರೀಯ ಉದ್ಯಾನವನ ಕಾರ್ಕಳ ವ್ಯಾಪ್ತಿಯ ನಿವಾಸಿಗಳ ಪುನರ್ವಸತಿ ಮತ್ತು ಪರಿಹಾರದ ಸುತ್ತೋಲೆ ಸರ್ಕಾರಿ ಆದೇಶ ಸಂಖ್ಯೆ: ಖಆ–26–ಖಇಊ–2003 ಬೆಂಗಳೂರು ದಿನಾಂಕ: 18/04/2005 ಆಗಿರುತ್ತದೆ. ಈ ಸರ್ಕಾರಿ ಆದೇಶವನ್ನು ಪುನರ್ ಪರಿಶೀಲಿಸಲು ಕೋರಿ ಮನವಿ.**

ಮಾನ್ಯರೇ,

ಮೇಲ್ಕಂಡ ಯೋಜನೆಯ ವ್ಯಾಪ್ತಿಯ ಒಳಗಡೆ ವಾಸ ಮಾಡುವ ನಾವುಗಳು ಮನವಿ ಮಾಡಿಕೊಳ್ಳುವುದೇನೆಂದರೆ, **ಕುದುರೇಮುಖ ರಾಷ್ಟ್ರೀಯ ಉದ್ಯಾನವನ ಕಾರ್ಕಳ ವ್ಯಾಪ್ತಿಯ ನಿವಾಸಿಗಳ ಪುನರ್ವಸತಿ ಮತ್ತು ಪರಿಹಾರದ ಸುತ್ತೋಲೆ ಸರ್ಕಾರಿ ಆದೇಶ ಸಂಖ್ಯೆ: ಖಆ–26–ಖಇಊ–2003 ಬೆಂಗಳೂರು ದಿನಾಂಕ: 18/04/2005ರಲ್ಲಿ ಘೋಷಣೆಯಾಗಿರುತ್ತಾರೆ**. ತದನಂತರ ಇಲ್ಲಿಯ ಮೂಲ ನಿವಾಸಿಗಳನ್ನು ಪುನರ್ ವಸತಿ ಗೊಳಿಸಲು ಪುನರ್ ವಸತಿ ಮತ್ತು ಪರಿಹಾರ ನೀಡಲು ಸರ್ಕಾರಿ ಆದೇಶ **2005**ರ ಘೋಷಣೆ ಮಾಡಿರುವುದು ಸರಿಯಷ್ಟೇ. **2005**ರಲ್ಲಿ ಸರ್ಕಾರದಿಂದ ಅನುಮತಿ ಪಡೆಯುವಾಗ **2008**ರ ಒಳಗೆ ಎಲ್ಲಾ ಕುಟುಂಬಗಳನ್ನು ಪುನರ್ ವಸತಿಗೊಳಿಸುವುದಾಗಿ ಉಲ್ಲೇಖ ಮಾಡಿರುತ್ತಾರೆ. ಆದರೆ 2025ನೇ ವಷ ಕಳೆದರೂ ಈ ವರೆಗೂ ಪುನರ್ವಸತಿಗೊಳಿಸುವ ಕಾರ್ಯ ಪೂರ್ಣಗೊಳಿಸಿರುವುದಿಲ್ಲ. ***ಆದರೇ 2025ರಲ್ಲಿ ಪುನರ್ ವಸತಿಗಾಗಿ ಹಣ (ಜಮೀನು, ಮನೆಗಳಿಗೆ ಪುನರ್ವಸಿತಿ ಮೌಲ್ಯವನ್ನು) ಕೊಡುವಾಗ 20 ವರ್ಷಗಳ ಹಿಂದಿನ ಎಸ್ ಆರ್ ದರದಂತೆ ಅಂದರೆ 20 ವರ್ಷಗಳ ನಂತರವೂ ಸಹ 2005ರ ಎಸ್ ಆರ್ ದರದಂತೆ*** ಹಣವನ್ನು ನೀಡುತ್ತಿದ್ದಾರೆ. ಹಣದುಬ್ಬರದಿಂದ ಜಮೀನು ಮತ್ತು ಮನೆಗಳೂ ಸೇರಿದಂತೆ ಸರಕು–ಸೇವೆಗಳ ಬೆಲೆಗಳು ಗಗನಕ್ಕೆ ಏರುತ್ತಿದ್ದು, ಹಣದ ಮೌಲ್ಯವು ಕಾಲಕಾಲಕ್ಕೆ ಏರಿಳಿತಕ್ಕೆ ಒಳಗಾಗುತ್ತಿದ್ದು, ಶೇಕಡ 5ರಿಂದ 6 ಪ್ರತಿಶತ ಹಣದ ಮೌಲ್ಯವು ಕಡಿಮೆಯಾಗಿರುತ್ತದೆ ***ಆದರೆ ಭೂಮಿಯ ಬೆಲೆಯು ನಾಲ್ಕೈದು ಪಟ್ಟು ಹೆಚ್ಚಾಗಿರುತ್ತದೆ.*** ಈಗ ಕೊಡುತ್ತಿರುವ ಪುನರ್ ವಸತಿ ಮೌಲ್ಯದಿಂದ ಅನೇಕ ಕುಟುಂಬಗಳು ಬೀದಿಯಲ್ಲಿ ಬೀಳುವ ಪರಿಸ್ಥಿತಿಯಲ್ಲಿದ್ದಾರೆ. ಕಾರಣ ಸರ್ಕಾರ ಜಾಗವನ್ನೂ ಸಹ ನೀಡುತ್ತಿಲ್ಲ ಹಾಗೂ ಸರ್ಕಾರ ನೀಡುತ್ತಿರುವ ಪುನರ್ವಸತಿ ಯೋಜನೆಯಡಿ ನೀಡುವ ಹಣದಿಂದ ಬೇರೆಡೆ ಜಮೀನು ಮನೆಗಳನ್ನು ಕೊಳ್ಳಲೂ ಆಗುವುದಿಲ್ಲ. ಆದ್ದರಿಂದ ಸರ್ಕಾರ ಯೋಜನೆಗಾಗಿ ಮೂಲ ನಿವಾಸಿಗಳು ತಾವು ಕಟ್ಟಿಕೊಂಡ ಬದುಕನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟು ದಿಕ್ಕು ದೆಸೆ ಇಲ್ಲದೇ ಬಿಟ್ಟು ಹೋಗುವ ಪರಿಸ್ಥಿತಿ ಮತ್ತು ಸರ್ಕಾರ ಕೊಡುವ ಹಣ ನೆಲೆ ನಿಲ್ಲಲು ಸಾಕಾಗದೇ

ಬೀದಿಯಲ್ಲಿ ಬೀಳುವ ಪರಿಸ್ಥಿತಿ ಒದಗಿ ಬಂದಿದೆ. ಆದ್ದರಿಂದ ತತ್ಕ್ಷಣ 2005ರ ಪುನರ್ ವಸತಿ ಪ್ಯಾಕೇಜಿನಲ್ಲಿ ಘೋಷಿಸಿರುವ ಎಲ್ಲಾ ಮೌಲ್ಯಗಳನ್ನು 2025ರ ಮಾರ್ಕೆಟ್ ದರಕ್ಕೆ ಹೋಲಿಕೆ ಮಾಡಿ ಮೇಲ್ಕಂಡ ಆದೇಶಗಳನ್ನು ಪುನರ್ ಪರಿಶೀಲಿಸಿ ಹೊಸ ಆದೇಶ ಮಾಡಿಸಿಕೊಡಬೇಕಾಗಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಅಲ್ಲದೆ **ಕುದುರೇಮುಖ ರಾಷ್ಟ್ರೀಯ ಉದ್ಯಾನವನ ಕಾರ್ಕಳ ವ್ಯಾಪ್ತಿಯ ನಿವಾಸಿಗಳ ಪುನರ್ವಸತಿ ಮತ್ತು ಪರಿಹಾರದ ಸುತ್ತೋಲೆ ಸರ್ಕಾರಿ ಆದೇಶ ಸಂಖ್ಯೆ: ಖಅ–26–ಖಇಊ–2003 ಬೆಂಗಳೂರು ದಿನಾಂಕ: 18/04/2005ರಲ್ಲಿ** ಈ ಕೆಳಕಂಡಂತೆ ಬದಲಾಯಿಸಿ ಆದೇಶ ಮಾಡಿಸಿಕೊಡಬೇಕಾಗಿ ಕೇಳಿಕೊಳ್ಳುತ್ತೇವೆ.

1) ಪುನರ್ ವಸತಿ ಹೊಂದುವ ಪ್ರತಿ ಕುಟುಂಬಕ್ಕೆ ಕನಿಷ್ಟ 50ಲಕ್ಷ ಮೂಲ ಪರಿಹಾರ ಒಂದೇ ಇಡಿಗಂಟಿನಲ್ಲಿ ನೀಡುವ ಪ್ಯಾಕೇಜ್ ನ್ನು ನೀಡಬೇಕು.
2) 2005ರ ಸರ್ಕಾರಿ ಆದೇಶದಲ್ಲಿ ಹೇಳಿರುವಂತೆ ಅಕ್ರಮ ಸಾಗುವಳಿದಾರರು ಮತ್ತು ಅರಣ್ಯ ಒತ್ತುವರಿ ಸಾಗುವಳಿದಾರರ ಎಲ್ಲಾ ಜಮೀನು, ವಾಸದ ಮನೆ ಹಾಗೂ ಬೆಳೆಗಳಿಗೆ ಈಗಿನ ಮಾರುಕಟ್ಟೆ ದರದಲ್ಲಿ ಮೌಲ್ಯಮಾಪನ ಮಾಡಿ ಪರಿಹಾರ ನೀಡಬೇಕು.
3) ಪುನರ್ ವಸತಿ ನೀಡುವಾಗ ಈ ಕೆಳಕಂಡಂತೆ ಪುನರ್ ವಸತಿಗಾಗಿ ಹಣ ನೀಡುತ್ತಿದ್ದಾರೆ ಇವುಗಳನ್ನೆಲ್ಲವನ್ನು ಕನಿಷ್ಟ ಇವತ್ತಿನ ದರಕ್ಕೆ ಹೋಲಿಕೆ ಮಾಡಿ ನೀಡಬೇಕು.
    - ಮನೆ ಕಟ್ಟಿಕೊಳ್ಳಲು, ಜಾಗ ಕೊಳ್ಳಲು ಒಂದು ಅಡಿಗೆ 2005ರ ದರದಂತೆ 50ರೂಪಾಯೀ ಕೊಡುತ್ತಿದ್ದಾರೆ ಅದನ್ನು ಒಂದು ಅಡಿಗೆ ಕನಿಷ್ಟ 500ರೂ ನೀಡಬೇಕು.
    - ಒಂದು ಕುಟುಂಬಕ್ಕೆ ಮನೆ ಕಟ್ಟಿಕೊಳ್ಳಲು 40ಸಾವಿರ ಕೊಡುತ್ತಿದ್ದಾರೆ ಅದನ್ನು ಕನಿಷ್ಟ 5,00,000 ಕೊಡಬೇಕು.
    - ಒಂದು ಕುಟುಂಬದ ಮನೆ ಸಾಗಿಸಲು 8,000 ಕೊಡುತ್ತಿದ್ದಾರೆ ಅದನ್ನು ಕನಿಷ್ಟ 50,000 ಕೊಡಬೇಕು.
    - ಪ್ರತಿ ಕುಟುಂಬ ಹೊರಗೆ ಹೋಗಿ ಜೀವನ ಮಾಡಲು ಒಂದು ತಿಂಗಳಿಗೆ 2,800 ಅಂತೆ 6 ತಿಂಗಳಿಗೆ 16,800 ಕೊಡುತ್ತಾರೆ ಇದನ್ನು ಕನಿಷ್ಟ 1,00,000 ನೀಡಬೇಕು.
    - ರೈತರಿಗೆ ಉದ್ಯೋಗ ನಷ್ಟ ಪರಿಹಾರವಾಗಿ 20,000 ಕೊಡುತ್ತಾರೆ. ಇದನ್ನು ಕನಿಷ್ಟ 2ಲಕ್ಷ ಕೊಡಬೇಕು.

    ಪುನರ್ ವಸತಿ ಹೊಂದುವ ಕುಟುಂಬಗಳನ್ನು **2005ರ ಸರ್ಕಾರದ ಆದೇಶದ ಪ್ರಕಾರ:**
4) ದೊಡ್ಡ ಹಿಡುವಳಿದಾರರು, ಸಣ್ಣ ಇಡುವಳಿದಾರರು ಮತ್ತು ಅತಿ ಸಣ್ಣ ಭೂ ರೈತರು ಎಂದು 3 ಪಂಗಡ ಮಾಡಿರುತ್ತಾರೆ.
    - ದೊಡ್ಡ ಹಿಡುವಳಿದಾರರಿಗೆ 5 ಎಕರೆ ಭೂಮಿ ಅಥವಾ– 2,50,000 ಹಣ
    - ಸಣ್ಣ ಹಿಡುವಳಿದಾರರಿಗೆ 3 ಎಕರೆ ಭೂಮಿ ಅಥವಾ – 1,50,000 ಹಣ
    - ಭೂ ರೈತರಿಗೆ 2 ಎಕರೆ ಭೂಮಿ ಅಥವಾ – 1,00,000 ಹಣ
    - ಆದರೆ ಇಲ್ಲಿಯವರೆಗೆ ನೀಡಿರುವ ಪುನರ್ವಸತಿ ಯೋಜನೆಯನ್ನು ಅನುಷ್ಠಾನಗೊಳಿಸುವಾಗ ಭೂಮಿಯನ್ನು ಕೊಡದೆ ಕೇವಲ ಹಣವನ್ನು ಮಾತ್ರ ಕೊಡುತ್ತಿದ್ದಾರೆ, ಬದಲಾಗಿ 1 ಎಕರೆಗೆ 50,000 ರೂ ಅಂತೆ ಹಣವನ್ನು ಕೊಡುತ್ತಾರೆ. ಈ

ಹಣವನ್ನು ತಾಲ್ಲೂಕಿನ ಗರಿಷ್ಟ ಮಾರ್ಕೇಟ್ ದರ ಅಥವಾ ಎಕರೆಗೆ 5,00,000 ಆದರೂ ನೀಡಬೇಕು ಇಲ್ಲವಾದರೆ ಜಾಗವನ್ನೇ ಕೊಡಬೇಕು.

5) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಭೂ ಒಡೆತನ ಯೋಜನೆ ಅಡಿ ಭೂಮಿಯನ್ನು ನೀಡಬೇಕು.
6) ಪುನರ್ ವಸತಿ ಪರಿಹಾರ ಮೌಲ್ಯಮಾಪನ ಸಮಿತಿಯಲ್ಲಿ ಸ್ಥಳೀಯ ಪ್ರತಿನಿಧಿಗಳನ್ನು ಸೇರಿಸಿಕೊಳ್ಳಬೇಕು. ಇದರ ಪ್ರಮಾಣ 50:50 ಆದರೂ ಇರಬೇಕು.
7) ಪುನರ್ ವಸತಿ ಹೊಂದುವ ಎಲ್ಲಾ ಕುಟುಂಬಳಿಗೂ ನಿರಾಶ್ರಿತರು ಎಂಬ ದೃಢೀಕರಣ ಪತ್ರ ನೀಡಬೇಕು ಹಾಗೂ ಪ್ರತೀ ಕುಟುಂಬಕ್ಕೂ ಒಂದು ಸರ್ಕಾರಿ ಹುದ್ದೆ ನೀಡಬೇಕು. ವಿದ್ಯಾಭ್ಯಾಸ ಮತ್ತು ಸರ್ಕಾರಿ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು.
8) ಪುನರ್ ವಸತಿ ಮತ್ತು ಪರಿಹಾರಕ್ಕಾಗಿ ಬಜೆಟ್ (ಆಯ–ವ್ಯಯ) ನಲ್ಲಿ ಹಣ ಇಡಿಸಿ ಒಮ್ಮೆಲೆ ಎಲ್ಲಾ ಕುಟುಂಬಗಳಿಗೂ ಪರಿಹಾರ ನೀಡಬೇಕು ಮತ್ತು ಇದಕ್ಕೆ ಗರಿಷ್ಠ ಕಾಲಮಿತಿಯನ್ನು ನಿಗದಿ ಪಡಿಸಬೇಕು.
9) 2013 ರ ಭೂಸ್ವಾಧಿನ ಕಾಯ್ದೆಯಂತೆ ಪರಿಹಾರ ನೀಡಬೇಕು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಖಆ–26–ಖಇಊ 2003 ಬೆಂಗಳೂರು ದಿನಾಖ: 18/04/2025 ಆದೇಶದಲ್ಲಿ ಸೂಚಿಸಿರುವಂತೆ ಎಲ್ಲಾ ಅಂಶಗಳನ್ನು ಮೌಲ್ಯಮಾಪನ ಮಾಡುವಾಗ ಎಥಾವತ್ತಾಗಿ ಪಾಲನೆ ಮಾಡಬೇಕು.

10) ಕುದುರೇಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯಲ್ಲಿ ಬರುವ ಅನೇಕ ರೈತರು ಅರಣ್ಯವನ್ನು ಕಾಯ್ದೆ ಅಡಿ ಭೂಮಿ ಪಡೆದಿರುತ್ತಾರೆ. ಆದರೆ ಅದನ್ನು ಪಹಣಿಯಲ್ಲಿ ನಮೂದು ಮಾಡದಂತೆ ಅರಣ್ಯ ಇಲಾಖೆಯವರು ಕಂದಾಯ ಇಲಾಖೆಗೆ ಪಹಣಿಯಲ್ಲಿ ನಮೂದು ಮಾಡದಂತೆ ಒತ್ತಡ ಹೇರಿ ಪಹಣಿಯಲ್ಲಿ ನಮೂದು ಆಗುತ್ತಿಲ್ಲ. ಹಾಗೆಯೇ ಇದರ ಬಗ್ಗೆ 2005ರ ಆದೇಶದಲ್ಲಿ ನಮೂದು ಆಗಿರುವುದಿಲ್ಲ. ಆದ್ದರಿಂದ ಈ ಅಂಶವನ್ನು ಸಹ ಹೊಸ ಆದೇಶದಲ್ಲಿ ಸೇರಿಸಬೇಕಾಗಿ ವಿನಂತಿ.
11) ವಾಸದ ಮನೆಗಳಿಗೆ ಈ ಸ್ವತ್ತು ಇರುವುದಿಲ್ಲ ಇಂತಹ ಪ್ರಕರಣಗಳನ್ನು ಸರಳೀಕರಿಸಬೇಕು ಅಥವಾ ಹಕ್ಕು ಪರಿತ್ಯಾಜನ ಪತ್ರದ ಮುಖಾಂತರ ಪರಿಹಾರ ನೀಡಬೇಕು.
12) ಈಗಾಗಲೇ ಜಿಲ್ಲಾ ಸಮಿತಿಯಲ್ಲಿ ಅನುಮೋದನೆಗೊಂಡ ಹಾಗೂ ಪರಿಹಾರ ನೀಡಲು ಬಾಕಿ ಇರುವ ಪ್ರಕರಣಗಳು ಮತ್ತು ಮೌಲ್ಯಮಾಪನ ಸಂಪೂರ್ಣಗೊಂಡ ಜಿಲ್ಲಾ ಸಮಿತಿಯ ಅನುಮೋದನೆಗೆ ಬಾಕಿ ಇರುವ ಪ್ರಕರಣೆಗಳಿಗೆ 2025 ರ ಹೊಸ ದರ ಅನ್ವಯಿಸುವಂತೆ ಮಾಡುವುದು.
13) ಜಮೀನಿನಲ್ಲಿ ನೀರಾವರಿಗೆ ಅಳವಡಿಸಿರುವ ಪೈಪ್ ಲೈನ್ ಹಾಗೂ ತೋಟದ ರಕ್ಷಣೆಗೆ ನಿರ್ಮಿಸಿದ ( ಕಲ್ಲು ಕಂಬ ನಿರ್ಮಿತ ತಂತಿ ಬೇಲಿ) ಯನ್ನು ಮೌಲ್ಯಮಾಪನ ವೇಳೆಯಲ್ಲಿ ಪರಿಗಣಿಸಬೇಕು.
14) ಪುನರ್ವಸತಿಗೊಳಿಸುವ ಕುಟುಂಬಗಳಿಗೆ ದೇಶದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಪ್ರಸ್ತುತ ಮಾರುಕಟ್ಟೆ ದರಕ್ಕಿಂತ 1:4 ಪ್ರಮಾಣದಲ್ಲಿ ಜಮೀನು ಮತ್ತು ವಾಸದ ಮನೆಗಳಿಗೆ ಹೆಚ್ಚುವರಿ ಮೌಲ್ಯದ ಪರಿಹಾರ ನೀಡಬೇಕು.

15) ತೋಟಗಾರಿಕೆ ಇಲಾಖೆಯ ಬೆಳೆಗಳ ಮೌಲ್ಯಮಾಪನ ವೇಳೆಯಲ್ಲಿ ರೈತರು ಬೆಳೆದ ಎಲ್ಲಾ ಮಾದರಿಯ ಬೆಳೆಗಳಿಗೆ ಗ್ರೇಡ್ 1 ದರ್ಜೆ ನೀಡಬೇಕು.

16) ಕೇಂದ್ರ ಸರ್ಕಾರದ ಕಾಂಪೋಬೋರ್ಡ್ ಅನುದಾನವನ್ನು ಕುದುರೇಮುಖ ರಾಷ್ಟ್ರೀಯ ಉದ್ಯಾನ ಪುನರ್ ವಸತಿ ಯೋಜನೆಯ ಪ್ಯಾಕೇಜಿಗೆ ಬಳಿಸಲು ರಾಜ್ಯಸರ್ಕಾರದ ವತಿಯಿಂದ ಮನವಿ ಸಲ್ಲಿಸಬೇಕು.

17) ಕುದುರೇಮುಖ ರಾಷ್ಟ್ರೀಯ ಉದ್ಯಾನ ಗಡಿ ರೇಖೆಯ ಒಳಗೆ ಒಳ ಪಡುವಂತಹ ನಿವೇಷನ ಹಾಗೂ ಸಾಗುವಳಿ ಜಮೀನುಗಳಿಗೂ ಸಹ ಮೌಲ್ಯಮಾಪನ ಮಾಡಿ ಪರಿಹಾರವನ್ನು ನೀಡಬೇಕು.

18) ಪುನರ್ವಸತಿ ಪ್ಯಾಕೇಜ್ ನಲ್ಲಿ ಸರ್ಕಾರದ ಈಗಿನ ಆದೇಶದ ಪ್ರಕಾರ ಶೃಂಗೇರಿ ತಾಲ್ಲೂಕಿನ ಕಿಗ್ಗಾ ಹೋಬಳಿಯ ಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಖುಷ್ಕಿ ಜಮೀನಿಗೆ 2 ಲಕ್ಷ, ತರಿ ಜಮೀನಿಗೆ 2.5 ಲಕ್ಷ ಹಾಗೂ ಭಾಗಾಯ್ತಿಗೆ 6 ಲಕ್ಷದ 80 ಸಾವಿರವನ್ನು ನಿಗದಿ ಪಡಿಸಲಾಗಿದೆ. ಇದನ್ನು ಕ್ರಮವಾಗಿ ಖುಷ್ಕಿ ಜಮೀನಿಗೆ ಪ್ರತಿ ಎಕರೆಗೆ 10 ಲಕ್ಷ, ತರಿ ಜಮೀನಿಗೆ 20 ಲಕ್ಷ ಮತ್ತು ಬಾಗಾಯ್ತಿಗೆ 40 ಲಕ್ಷವನ್ನು ನಿಗದಿ ಮಾಡಿ ಪರಿಹಾರವನ್ನು ನೀಡಬೇಕು.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಹಾನುಭೂತಿಯಿಂದ ಸರ್ಕಾರಿ ಆದೇಶವನ್ನು ಪುನರ್ ಪರಿಶೀಲಿಸಿ ಹೊಸ ಆದೇಶವನ್ನು ಮಾಡಿಸಿ ಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

**ದಿನಾಂಕ: 29–10–2025** **ಇಂತಿ ವಂದನೆಗಳು**

**ಅಧ್ಯಕ್ಷರು ಮತ್ತು ಸದಸ್ಯರು**
**ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಪುನರ್ವಸತಿ ಹೋರಾಟ ಸಮಿತಿ**
**ಸಂಪರ್ಕ : 1)9148652135 2) 9449412442 3) 7899358936**